ಶ್ರೀಮತಿ ನಫೀಜ ಫಜಲ್ :— ನಮ್ಮ ರಾಜ್ಯದಲ್ಲಿ 22 ಮೆಡಿಕಲ್ ಕಾಲೇಜುಗಳಿವೆ, 11 ಸರ್ಕಾರಿ ನರ್ಸಿಂಗ್ ಶಾಲೆಗಳು, 143 ಖಾಸಗಿ ನರ್ಸಿಂಗ್ ಶಾಲೆಗಳಿವೆ.

SRI A.S. Guruswamy :— What is the ratio? How it is equal to intake in the nursing schools?

ಶ್ರೀಮತಿ ನಫೀಜ ಫಜಲ್ :— ಆ ಮಾಹಿತಿ ನಮ್ಮಲ್ಲಿ ಈಗ ಇಲ್ಲ. Ratio has to be worked out.

ಚಾಮರಾಜನಗರ ತಾಲ್ಲೂಕಿನಲ್ಲಿ ಪಡಿತರ ಚೀಟಿಗಳ ಬದಲಾವಣೆ.

592(5713) ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) :— ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಕಿಲಗೆರೆ ಗ್ರಾಮದ ನ್ಯಾಯಬೆಲೆ ಅಂಗಡಿ ಮಾಲೀಕರುಗಳು ನೂರಾರು ಹಸಿರು ಕಾರ್ಡುಗಳನ್ನು ತಿದ್ದಿ ಹಳದಿ ಕಾರ್ಡುಗಳನ್ನಾಗಿ (ಕಾರ್ಡ್ ಪರಿವರ್ತನೆ ಮಾಡಿ) ಮಾರ್ಪಡಿಸಿ ಫಲಾನುಭವಿಗಳಿಗೆ ಆಹಾರ ವಿತರಣೆಯನ್ನು ಕಡಿಮೆ ಪ್ರಮಾಣದಲ್ಲಿ ಹಂಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕಾರ್ಡುಗಳನ್ನು ಪರಿವರ್ತನೆಮಾಡಲು ಕಾರಣಗಳೇನು?

ಇ) ಇದರಿಂದ ಅಧಿಕೃತವಾಗಿ ಪಡೆದ ಹಸಿರು ಕಾರ್ಡುದಾರರಿಗೆ ಅನ್ಯಾಯವಾದಂತಾಗಿಲ್ಲವೇ?

ಈ) ಅನಧಿಕೃತ ಕಾರ್ಡುಗಳನ್ನು ಮಾರ್ಪಡಿಸಿದ ತಪ್ಪಿತಸ್ಥರುಗಳು ಯಾರುಯಾರು? ಇವರುಗಳ ಮೇಲೆ ಸರ್ಕಾರ ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದೇ?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಸಿ. ಗುರುಸ್ವಾಮಿ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಉತ್ತರವನ್ನು ನೋಡಿದರೆ, ಜಿಲ್ಲಾಧಿಕಾರಿಗಳಿಂದ ಮಾಹಿತಿ ತರಿಸಿಕೊಂಡು ಉತ್ತರ ಕೊಟ್ಟಿದ್ದಾರೋ ಅಥವಾ ಇವರ ಕಛೇರಿಯ ಮಾಹಿತಿಯನ್ನುಸರಿಸಿ ಉತ್ತರ ಕೊಟ್ಟಿದ್ದಾರೋ ಎನ್ನುವ ಬಗ್ಗೆ ನನಗೆ ಸಂಶಯ ಬರುತ್ತದೆ. ನನ್ನ ಮೊದಲನೆಯ ಪ್ರಶ್ನೆಗೆ ಇಲ್ಲವೆಂದು ಉತ್ತರ ನೀಡಿದ್ದಾರೆ. ನನ್ನ ಪ್ರಕಾರ ಈ ಕೆಲಗೆರೆ ಗ್ರಮದಲ್ಲಿ ನೂರಾರು ಹಸಿರು ಕಾರ್ಡುಗಳನ್ನು ತಿದ್ದಿ ವರ್ಷಾನುಗಟ್ಟಲೆ ಆಹಾರ ಪದಾರ್ಥಗಳನ್ನು ಕಡಿಮೆ ಬೆಲೆಗೆ ಕೊಂಡು ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಮತ್ತು ಶಾಲಾಮಕ್ಕಳಿಗೆ ಅಕ್ಕಿ ಕೊಡುವುದರ ಬಗ್ಗೆ ಗ್ರಾಮಸ್ಥರು ಡಿ.ಸಿ.ಗೆ ದೂರು ಕೊಟ್ಟು, ಡಿ.ಸಿ.ಯವರು ತಹಸಿಲ್ದಾರ್ ಮೂಲಕ ತನಿಖೆ ಮಾಡಿಸಿ ವರದಿಯನ್ನು ತರಿಸಿಕೊಂಡಿದ್ದಾರೆ, ಆತ ಮಾಡಿರುವುದು ನಿಜ, ಅಕ್ರಮ ಎಸಗಿದ್ದಾನೆಂಬುದು ತಿಳಿದು ಬಂದಿದೆ. ನಂತರ ಡಿ.ಸಿ.ಯವರು ಆ ನ್ಯಾಯಬೆಲೆ ಅಂಗಡಿ ಮಾಲೀಕನಿಗೆ ಕ್ಷಮಾಪಣೆಯನ್ನು ಕೊಟ್ಟು ಅಂಗಡಿಯನ್ನು ಮುಂದುವರೆಸುವ ಆದೇಶವನ್ನು ಕೊಟ್ಟಿದ್ದಾರೆ. ಈ ವಿಚಾರ ಗಮನಕ್ಕೆ ಬಂದಿಲ್ಲವೆಂದರೆ ನನ್ನ ಮನಸ್ಸಿಗೆ ನೋವಾಗುತ್ತದೆ.

ಶ್ರೀ ಡಿ.ಬಿ. ಇನಾಂದಾರ್ :— ತಾವು ಹಸಿರು ಕಾರ್ಡುಗಳನ್ನು ತಿದ್ದಿ ಹಳದಿ ಕಾರ್ಡುಗಳನ್ನಾಗಿ ಮಾರ್ಪಾಡಿಸಲಾಗಿದೆಯೇ ಎಂದು ಕೇಳಿದ್ದೀರಿ, ಇನ್ನೂ ಕೂಡ ಹಳದಿ ಕಾರ್ಡ್ ಅನ್ನು ಪರಿವರ್ತನೆ ಮಾಡಿಲ್ಲ. ಹಳದಿ ಕಾರ್ಡ್ ಅನ್ನು ಪರಿವರ್ತಿಸುವ ಯೋಜನೆಯನ್ನು ಇನ್ನೂ ಜಾರಿಗೆ ತಂದಿಲ್ಲ, ಅಂದಾಗ ಹಸಿರುಕಾರ್ಡುಗಳನ್ನು ಪರಿವರ್ತಿಸಲು ಹೇಗೆ ಸಾಧ್ಯ? ಕೆಲಗೆರೆ ಗ್ರಾಮದಲ್ಲಿ 54 ಹಸಿರು ಕಾರ್ಡುಗಳಲ್ಲಿ 30 ಇನ್‌ಎಲಿಜಬಲ್ ಇದ್ದು 30 ಕಾರ್ಡುಗಳನ್ನು ಕೇಸರಿ ಕಾರ್ಡುಗಳಾಗಿ ನ್ಯಾಯ ಬೆಲೆ ಅಂಗಡಿ ಮಾಲೀಕ ತಾನೇ ಬರೆದು ಪರಿವರ್ತನೆ ಮಾಡಿದ್ದು ನಮ್ಮ ಗಮನಕ್ಕೆ ಬಂದಿದೆ. ಡಿ.ಸಿ.ಯವರು ಅವನಿಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ, ಅಪೀಲ್ ಇದೆ, ಅವನ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಗುರುಸ್ವಾಮಿ :— ಬಹುಶಃ ಈ ವಿಚಾರವೆಲ್ಲ ಮಂತ್ರಿಗಳಿಗೆ ಗೊತ್ತಿದ್ದರೂ ಸಹ ಉತ್ತರದಲ್ಲಿ ಸರ್ಕಾರದ ಗಮನಕ್ಕೆ ಬಂದೇ ಇಲ್ಲವೆಂದು ಹೇಳುತ್ತಾರೆ.

ಶ್ರೀ ಡಿ.ಬಿ. ಇನಾಂದಾರ್ :— ಹಳದಿ ಕಾರ್ಡ್ ಆಗಿ ಪರಿವರ್ತನೆ ಮಾಡಲಾಗಿದೆಯೆ ಎಂದು ಹಳದಿ ಕಾರ್ಡ್ ಯೋಜನೆ ಇನ್ನೂ ಜಾರಿಗೆ ಬಂದೇ ಇಲ್ಲವೆಂಬುದನ್ನು ತಿಳಿದುಕೊಳ್ಳಬೇಕು ಮಾನ್ಯ ಸದಸ್ಯರು ಕೇಳಿದರು, ಇನ್ನೂ ಪರಿವರ್ತನೆ ಮಾಡಿಲ್ಲ, ಕೊಟ್ಟಿಲ್ಲ.

ಅಧ್ಯಕ್ಷರು :— ಗುರುಸ್ವಾಮಿಯವರೆ, ಪರಿವರ್ತನೆ ಮಾಡಲಾಗಿದೆಯೆ ಎಂದು ತಾವು ಕೇಳಿದ್ದಕ್ಕೆ ಆ ರೀತಿ ಇನ್ನು ಮಾಡಿಲ್ಲವೆಂದು ಮಂತ್ರಿಗಳು ಹೇಳಿದ್ದಾರೆ, ಆ ರೀತಿಯೇನಾದರು ಮಾಡಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ, ಮತ್ತೆ ಬೇರೆ ಉಪ ಪ್ರಶ್ನೆ ಏನಿದೆ ಕೇಳಿ.

ಶ್ರೀ ಎ. ರಾಮದಾಸ್:— ಒಂದೇ ಒಂದು ಪದದಿಂದ ಯಾರು ತಪ್ಪನ್ನು ಮಾಡಿದ್ದಾರೋ ಅವರು ತಪ್ಪಿಸಿಕೊಳ್ಳುವುದು ಬೇಡ, ಅವರು ಕಾರ್ಡನ್ನು ತಿದ್ದಿದ್ದಾರೆಂದು ಮಂತ್ರಿಗಳು ಹೇಳುತ್ತಾರೆ, ಹಸಿರಿರಬಹುದು, ಹಳದಿ ಇರಬಹುದು. ಅಂಗಡಿಯ ಮಾಲಿಕನೇ ಕಾರ್ಡನ್ನು ತಿದ್ದಿ, ತನಿಖೆಯಾಗಿ ಕ್ರಮ ಕೈಗೊಂಡಿರುವ ಎಲ್ಲಾ ಪ್ರಕರಣವಿರುವಾಗ, ಹಳದಿ, ಕೇಸರಿ ಎಂಬುವ ಪದದಿಂದಾಗಿ ಕ್ರಮವನ್ನು ಏನು ತೆಗೆದುಕೊಂಡಿಲ್ಲವೆಂದು ಮಂತ್ರಿಗಳು ಹೇಳುವುದು ಬೇಡ, ಕ್ರಮ ಕೈಗೊಳ್ಳಬೇಕು, ಜಿಲ್ಲಾಧಿಕಾರಿಗಳು ಎಲ್ಲಾ ಕ್ರಮವನ್ನು ಕೈಗೊಂಡು ಸಸ್ಪೆಂಡ್ ಮಾಡಿದ ಮೇಲೂ ಮತ್ತೆ ಏತಕ್ಕೆ ಅಂಗಡಿ ನಡೆಸಲು ಅವಕಾಶ ಕೊಟ್ಟರು.

ಶ್ರೀ ಡಿ.ಬಿ. ಇನಾಂದಾರ್:— ಹಳದಿ ಕಾರ್ಡಿಗೆ ಪರಿವರ್ತನೆ ಮಾಡಿದ್ದಾರೆಯೇ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದರು, ಹಳದಿ ಕಾರ್ಡಿನ ಯೋಜನೆಯನ್ನು ನಾವು ಇನ್ನೂ ಜಾರಿಗೆ ತಂದಿಲ್ಲ ಎಂಬುದನ್ನು ನಾವು ಗಮನದಲ್ಲಿಟ್ಟುಕೊಂಡು ಉತ್ತರ ಕೊಟ್ಟಿದ್ದೇನೆ. ಹಳದಿ ಕಾರ್ಡ್ ಬಗ್ಗೆ ಪ್ರಶ್ನೆ ಕೇಳಿ ಕೇಸರಿ ಕಾರ್ಡ್ ಬಗ್ಗೆ ಕೊಡಿ ಎಂದರೆ ಕೊಡಲು ಸಾಧ್ಯವಿಲ್ಲ. ಆದರೆ ಬದಲಾವಣೆಯಾಗಿದೆ, ತಪ್ಪಾಗಿದೆ ಎಂದು ನನಗೆ ತಿಳಿದ ನಂತರ ಕ್ರಮ ಕೈಗೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದ್ದೇನೆ.

ಬಿಜಾಪುರ ನಗರಸಭೆಯ ಚರಾಸ್ತಿಗಳ ಗುತ್ತಿಗೆ ಬಗ್ಗೆ.

472(4110) ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತೀಕೋಟ):— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ನಗರಸಭೆಯ ಚರಾಸ್ತಿಗಳನ್ನು 101 ವರ್ಷ, 90 ವರ್ಷ ಹಾಗೂ ಹಲವು ವರ್ಷಗಳವರೆಗೆ ಗುತ್ತಿಗೆ ಅವಧಿ ಮುಗಿದಿದ್ದರೂ ಪುನಃ ಗುತ್ತಿಗೆ ಮೇಲೆ ನಾಗರೀಕರಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗುತ್ತಿಗೆ ಅವಧಿ ಮುಗಿದಿದ್ದರೂ ಪುನಃ ನವೀಕರಣ ಮಾಡದಿರಲು ಕಾರಣವೇನು?

ಇ) ಸಕಾಲದಲ್ಲಿ ಗುತ್ತಿಗೆ ನೀಡದೆ ನಾಗರೀಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಗುತ್ತಿಗೆ ಮೇಲೆ ಸ್ಥಿರಾಸ್ತಿ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಈ) ಕೆಲವು ಲೀಜ್ ಆಸ್ತಿಗಳ ಮೇಲೆ ಕಟ್ಟಡ ಕಟ್ಟಲು ಅನುಮತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;